# ಸಂತ ರವಿದಾಸರು

ಮಾಘ ಪೂರ್ಣಿಮೆಯಂದು ಸಂತ ರವಿದಾಸರ ಜನ್ಮದಿನ. ಹದಿನಾಲ್ಕನೇ ಶತಮಾನ ಅಂತ್ಯದಲ್ಲಿ ಅಥವಾ ಹದಿನೈದನೇ ಶತಮಾನದ ಆದಿಯಲ್ಲಿ ಇವರ ಜನನವಾಗಿದೆ ಎಂದು ನಂಬಲಾಗಿದೆ. ನಿಖರವಾದ ತಾರೀಖು ಲಭ್ಯವಿಲ್ಲ. ವಾರಣಾಸಿಯ ಹತ್ತಿರದ ಗೋವರ್ಧನಪುರದಲ್ಲಿ ಸಂತೋಖ್ ದಾಸ್ ಮತ್ತು ಕಲ್ಸಾ ದೇವಿ ಎಂಬ ದಂಪತಿಗೆ ರವಿದಾಸರು ಹುಟ್ಟಿದರು. ಚಮ್ಮಾರ ಜಾತಿಯಲ್ಲಿ ಹುಟ್ಟಿ ಉತ್ತರ ಭಾರತದಲ್ಲಿ ಮೊದಲ ಕ್ರಾಂತಿಯ ಹರಿಕಾರರಾದರು. 8ನೆಯ ಶತಮಾನದ ನಂತರ ಬೌದ್ಧ ಧರ್ಮವನ್ನು ಪಲಾಯನಗೊಳಿಸಿದ ಮೇಲೆ ಅನ್ಯದೇಶೀಯರ, ಅನ್ಯಧರ್ಮೀಯರ ದಾಳಿ, ಆಕ್ರಮಣ ಮುಂದುವರೆದಿತ್ತು. ಭಾರತದ ವಾಯವ್ಯ ಗಡಿಯಿಂದಲೇ ಪ್ರವೇಶಿಸಿದ್ದ ಇಸ್ಲಾಂ ಧರ್ಮದ ಅತಿಕ್ರಮಣ ಮತ್ತು ಪ್ರಭಾವ ಬೆಳೆಯುತ್ತಿದ್ದ ಕಾಲ ಅದು. ಜಾತಿವ್ಯವಸ್ಥೆಯಿಂದ ತತ್ತರಿಸುತ್ತಿದ್ದ ಸನಾತನಧರ್ಮಕ್ಕೆ ರವಿದಾಸರಂತಹ ಸಂತರು ಆಶಾಕಿರಣವಾಗಿ ಕಂಡಿದ್ದರು. ಕೆಳಜಾತಿಗಳನ್ನು ಹಿಡಿದಿಟ್ಟುಕೊಳ್ಳುವುದು ಆದಿನಗಳ ತುರ್ತಾಗಿತ್ತು ಮತ್ತು ಆ ಜನರಿಗೆ ಆತ್ಮಸ್ಥೈರ್ಯವನ್ನು ತುಂಬುವ ಅಗತ್ಯವಿತ್ತು. ಅಂತಹ ಒಂದು ಸಂದಿಗ್ಧ ಕಾಲದಲ್ಲಿ ರವಿದಾಸರ ವೈಚಾರಿಕ ನಿಲುವು, ದೇವರನ್ನು ಅವರು ನಿರ್ವಚಿಸಿದ ಬಗೆ ಅನನ್ಯವಾಗಿದೆ. ಒಂದು ಕಡೆ 'ನಾನು ಕನಿಷ್ಠ ಜಾತಿ ಎಂದು ಕರೆಯುವ ಚಮ್ಮಾರ ಜಾತಿಯವನು, ಬನಾರಸಿನ ಆಸುಪಾಸಿನಲ್ಲಿ ಸತ್ತ ಪ್ರಾಣಿಗಳ ಚರ್ಮ ಸುಲಿಯುತ್ತೇನೆ. ಆದರೂ ನನ್ನ ಉತ್ತಮ ನಡತೆಯಿಂದ ಸಮಾಜದಲ್ಲಿ ಶ್ರೇಷ್ಠರೆಂದು ಗುರುತಿಸಿಕೊಂಡ ಬ್ರಾಹ್ಮಣರೂ ನನ್ನನ್ನು ಗೌರವಿಸುತ್ತಾರೆ, ವಂದಿಸುತ್ತಾರೆ' ಎಂದು ಹೇಳುತ್ತಾರೆ.

ಜಾತಿವ್ಯವಸ್ಥೆಯ ಬಗ್ಗೆ ತಿರುಗಿಬಿದ್ದ ಮೊದಲ ಸಂತ ರವಿದಾಸರು ಎಂದು ಮೇಲೆ ಹೇಳಿದೆ. ಜಾತಿ ವ್ಯವಸ್ಥೆಗೆ ಅವರು ಕೊಡುವ ರೂಪಕ ಆಸಕ್ತಿದಾಯಕವಾಗಿದೆ. ಭಾರತದ ಸಾಮಾಜಿಕ ವ್ಯವಸ್ಥೆ ಬಾಳೆ ಹಣ್ಣಿನ ಗಿಡದಂತೆಯೆ ಇದೆ. ಹೇಗೆ ಬಾಳೆ ಹಣ್ಣಿನ ಗಿಡದಲ್ಲಿ ಒಂದು ಎಲೆಯ ನಂತರ ಇನ್ನೊಂದು ಎಲೆ, ಮೇಲೆ ಕೆಳಗೆ ಜೋಡಿಸಿದಂತೆ ಬೆಳೆದಿರುತ್ತವೆಯೋ ಹಾಗೆಯೆ ನಮ್ಮ ಸಮಾಜದಲ್ಲಿಯೂ ಸಹ ಜಾತಿಯೊಳಗೊಂದು ಜಾತಿ ಅದರೊಳಗೆ ಇನ್ನೊಂದು ಜಾತಿ ಕುಡಿಯೊಡೆದಂತೆ ಕಾಣಿಸುತ್ತದೆ. ಇದನ್ನು ಇನ್ನೊಂದು ರೀತಿಯಲ್ಲಿ ಬಾಣಲೆಗಳನ್ನು ಜೋಡಿಸಿದ ಹಾಗೆ ಎಂದು ಸಹ ಹೇಳಬಹುದು. ಒಂದರೊಳಗೊಂದು ಅದರೊಳಗಿನ್ನೊಂದು ಎನ್ನುವಂತೆ ವ್ಯವಸ್ಥಿತವಾಗಿ ಜಾತಿಗಳು ಜೋಡಿಸಿಕೊಂಡಿವೆ. ಆದ್ದರಿಂದ ಮನುಷ್ಯ ಮನುಷ್ಯರ ನಡುವೆ ಬಂಧುತ್ವ ಚಿಗುರೊಡೆಯಲು ಸಾಧ್ಯವಿಲ್ಲ, ಮನುಷ್ಯ ಹುಟ್ಟಿನಿಂದ ಶ್ರೇಷ್ಠನಾಗಲಾರ, ಅವನ ಗುಣ ಕರ್ಮಗಳಿಂದ ಎಂಬ ತತ್ವವನ್ನೆ ರವಿದಾಸರು ಪ್ರತಿಪಾದಿಸಿದರು.

ರವಿದಾಸರು ಮೂಲತಹ ಕವಿ ಹಾಗೂ ವೈಚಾರಿಕರು. ಅವರು ಬರೆದಿರುವ ದೋಹೆಗಳು (ಎರಡು ಸಾಲಿನ ದ್ವಿಪದಿಗಳು) ನಮ್ಮ ಕೆಳವರ್ಗದ ವಚನಕಾರರನ್ನು ನೆನಪಿಗೆ ತರುತ್ತವೆ, ತಮ್ಮ ಅನುಭವದ ಮೂಲಕವೇ ಲೋಕವನ್ನು ಗ್ರಹಿಸುವ ಕ್ರಮ ಅದು. ಒಂದು ದೋಹೆ ಹೀಗಿದೆ. 'ನಾನು ಚರ್ಮದಿಂದಲೇ ಆಗಿದ್ದೇನೆ, ನೀನೂ ಚರ್ಮದಿಂದಲೇ ಆಗಿದ್ದೀಯೆ. ಇಡೀ ಜಗತ್ತಿನ ಜೀವರಾಶಿ ಚರ್ಮದಿಂದಲೇ ಆಗಿದೆ, ಚರ್ಮವಿಲ್ಲದ ಜೀವ ಯಾವುದಿದೆ ಚಮಾರ ರವಿದಾಸ' ಇಂತಹ ಆತ್ಮಪ್ರತ್ಯಯದ ಹೇಳಿಕೆಗಳು ಅವರ ದೋಹೆಗಳಲ್ಲಿ ವಿಪುಲವಾಗಿ ಕಾಣಸಿಗುತ್ತವೆ. ಒಮ್ಮೆ ಶಿಷ್ಯ ತಾವು ಗಂಗಾ ಸ್ನಾನಕ್ಕೆ ಹೋಗುತ್ತಿರುವುದಾಗಿಯೂ ನೀವೂ ಆ ಪವಿತ್ರ ಸ್ನಾನಕ್ಕೆ ಬರಬೇಕೆಂದು ಕರೆಯುತ್ತಾರೆ. ಆಗ ರವಿದಾಸರು ಅಂದೇ ಗಿರಾಕಿಯೊಬ್ಬರಿಗೆ ಪಾದರಕ್ಷೆಗಳನ್ನು ಕೊಡುವುದಾಗಿ ಮಾತು ಕೊಟ್ಟಿರುವುದರಿಂದ ಅವರ ಬಳಿ ಹೋಗಬೇಕಾಗಿದೆಯೆಂದು, ಬರಲಾಗುವುದಿಲ್ಲವೆಂದು ನಿಷ್ಠುರವಾಗಿ ಹೇಳಿಬಿಡುತ್ತಾರೆ. ಮತ್ತೂ ಬಲವಂತಪಡಿಸಿದಾಗ ಅವರು ಹೇಳುವ ಮಾತು ಇದು. ಈ ದೇಹ, ಆತ್ಮಗಳು ಪರಿಶುದ್ಧವಾಗಿರಬೇಕು, ಕೇವಲ ಗಂಗೆ ಪರಿಶುದ್ಧಳಾಗಿದ್ದರೆ ಸಾಲದು. ಆಗ ಬಚ್ಚಲಮನೆಯಲ್ಲಿ ಮಿಂದರೂ ಪವಿತ್ರ ಸ್ನಾನವೆ!

ಶೂದ್ರಾತಿಶೂದ್ರರಿಗೆ ದೇವಾಲಯ ಪ್ರವೇಶವಿಲ್ಲದಿದ್ದುದರಿಂದ ರವಿದಾಸ ತಮ್ಮ ಹದಿನೆಂಟನೆಯ ವಯಸ್ಸಿನಲ್ಲಿ ರಾಮ ಸೀತೆಯರ ಮಣ್ಣಿನ ಮೂರ್ತಿಗಳನ್ನು ಮಾಡಿ ಪೂಜಿಸುತ್ತಿದ್ದರು. ಇದರಿಂದ ಕೋಪಿಸಿಕೊಂಡ ಇವರ ತಂದೆ ಮನೆಯಿಂದ ಹೊರಹಾಕಿದರು. ಮುಂದೆ ಚಪ್ಪಲಿ ಹೊಲಿಯುವ ಕಾಯಕದೊಂದಿಗೆ ಜೀವನ ಸಾಗಿಸುತ್ತಾ ತಮ್ಮ ಭಕ್ತಿ ಮಾರ್ಗದಲ್ಲಿ ಸುಧಾರಣೆಗಳನ್ನು ಕಂಡುಕೊಂಡರು. ಕಾಲಕ್ರಮೇಣ ಅವರ ಸುಗುಣ ಭಕ್ತಿ ನಿರ್ಗುಣ, ನಿರಾಕಾರ ದೇವರತ್ತ ಒಲಿಯಿತು. ಮೂರ್ತಿಪೂಜೆಯನ್ನು ಧಿಕ್ಕರಿಸಿ ಸಮಾಧಿ ಮಾರ್ಗವನ್ನು ಅನುಸರಿಸಿದರು.

ಮುಂದಿನ ದೋಹೆಗಳು ಭಾವೈಕ್ಯತೆಯನ್ನೆ ಸಾರುತ್ತವೆ. ಹಿಂದೂ ಮುಸಲ್ಮಾನರ ಸಹಬಾಳ್ವೆಯನ್ನು ಕುರಿತು ಅನೇಕವಿವೆ. ಒಂದು ದೋಹೆಯಲ್ಲಿ 'ಮಸೀದಿಯ ಬಗ್ಗೆ ನನಗೇನು ದ್ವೇಷವಿಲ್ಲ, ಹಾಗೆಯೆ ಮಂದಿರದ ಮೇಲೂ ಪ್ರೀತಿ ಇಲ್ಲ, ಏಕೆಂದರೆ ಅವೆರಡರಲ್ಲೂ ಅಲ್ಲಾ ಅಥವಾ ರಾಮನಿಲ್ಲ' ಎನ್ನುತ್ತಾರೆ. ಇಂತಹ ಸಾಮರಸ್ಯದ ಸಂದೇಶದೊಂದಿಗೆ ಕಾಶ್ಮೀರದಿಂದ ಹಿಡಿದು ಒರಿಸ್ಸಾ, ಮಧ್ಯಪ್ರದೇಶ, ಬಿಹಾರ ಮುಂತಾದ ಕಡೆಗಳಲ್ಲಿ ಕಾಲ್ನಡಿಗೆಯಲ್ಲಿ ಸಂಚರಿಸಿ ಮಾನವ ದರ್ಮವನ್ನು ಬಿತ್ತರಿಸಿದರು. ಅನೇಕರು ಇವರ ಶಿಷ್ಯತ್ವವನ್ನು ಸ್ವೀಕರಿಸಿದರು. ಅಂಥವರಲ್ಲಿ ಚಿತ್ತೂರಿನ ರಾಣಿ ಮೀರಾಬಾಯಿಯೂ ಒಬ್ಬರು.

ಸಿಖ್ ಧರ್ಮ ಪ್ರಾದುರ್ಭವವಾಗುವ ಮುಂಚೆಯೆ ರವಿದಾಸರು ಆಗಿ ಹೋಗಿದ್ದರು, ಗುರುನಾನಕ್ ಹಿಂದೂ ಮತ್ತು ಇಸ್ಲಾಂ ಧರ್ಮಗಳ ಮೂಲ ತತ್ವಗಳನ್ನು ಹದವಾಗಿ ಬೆಸೆದು ಒಂದು ಹೊಸ ಧರ್ಮವನ್ನು ಕಟ್ಟಿದರು. ಸಿಖ್ ಧರ್ಮದ ಪವಿತ್ರ ಗ್ರಂಥವಾದ 'ಗುರುಗ್ರಂಥ್ ಸಾಹಿಬ್' ನಲ್ಲಿ ರವಿದಾಸರ 41 ವಚನಗಳಿವೆ. ಇವೆಲ್ಲವೂ ಸಮಾನತೆ, ಸಾಮಾಜಿಕ ಸಾಮರಸ್ಯವನ್ನು ಸಾರುವ ವಚನಗಳೇ ಆಗಿವೆ. ಇವುಗಳನ್ನು ರವಿದಾಸಿಯಾ ಎಂತಲೇ ಕರೆಯುತ್ತಾರೆ. ಅಂದರೆ ಸಿಖ ಧರ್ಮದ ಮೂಲ ಪ್ರೇರಣೆ ರವಿದಾಸರು ಎಂದಾಯಿತು. ಆದರೆ ಜಾತಿಪದ್ಧತಿ ಅಲ್ಲಿಯೂ ಸಂರಕ್ಷಿತವಾಗಿದ್ದು ಅಸ್ಪೃಶ್ಯತೆಯ ಆಚರಣೆಯೂ ಕೇಳಿಬರುತ್ತಿದೆ. ಅಲ್ಲಿನ ಸುಶಿಕ್ಷಿತ, ಬಹುಸಂಖ್ಯಾತ ಅಸ್ಪೃಶ್ಯ ಜಾತಿಗಳು ತಮ್ಮನ್ನು 'ರವಿದಾಸಿಯಾ' ಎಂದೇ ಕರೆದುಕೊಳ್ಳುತ್ತಿದ್ದಾರೆ ಮತ್ತು ತಮಗಾಗಿಯೆ ಬೇರೆಯಾದ ಗುರುದ್ವಾರಗಳನ್ನು ಕಟ್ಟಿಕೊಳ್ಳುತ್ತಿದ್ದಾರೆ! ಹೊರದೇಶಗಳಲ್ಲಿಯೂ ಇದು ಚಾಲ್ತಿಯಲ್ಲಿದೆ ಎಂಬುದು ಒಂದು ವ್ಯಂಗ್ಯ.

■ ಮೋಚಿ

## ಮಾತೇ ಮುತ್ತು

★ ನಿಮ್ಮ ಮನಸ್ಸು ಏನನ್ನಾದರೂ ನಂಬಿರಲಿ, ಅದನ್ನು ಸಾಧಿಸಿ ತೋರಿಸಬೇಕು.
-ನೆಪೋಲಿಯನ್ ಹಿಲ್

★ ಯಶಸ್ಸಿಗಾಗಿ ಒತ್ತಡ ಹಾಕಬೇಡಿ, ಮೌಲ್ಯಗಳಿಗಾಗಿ ಒತ್ತಡ ಹಾಕಿ.
-ಆಲ್ಬರ್ಟ್ ಐನ್‌ಸ್ಟೀನ್

★ ಬೆಂಕಿ ಇಲ್ಲದೆ ಮೇಣದ ಬತ್ತಿ ಉರಿಯಲಾಗದು. ಹಾಗೆಯೇ ಮನುಷ್ಯ ಆಧ್ಯಾತ್ಮಿಕ ಜೀವನ ಇಲ್ಲದೆ ಬದುಕಲಾಗದು.
-ಗೌತಮ ಬುದ್ಧ

★ ನಾನು ಯಾವತ್ತೂ ಯಾವ ನೆಪಗಳನ್ನೂ ಹೇಳಲಿಲ್ಲ. ಅದೇ ನನ್ನ ಯಶಸ್ಸಿನ ಗುಟ್ಟು.
-ಫ್ಲಾರೆನ್ಸ್ ನೈಟಿಂಗೇಲ್

★ ಜೀವನ ಇರುವುದು ಪಡೆದುಕೊಳ್ಳುವುದಕ್ಕಲ್ಲ. ಅದು ಇರುವುದು ಕೊಡುವುದಕ್ಕೆ.
-ಕೆವಿನ್ ಕ್ರೂಸ್

★ ಈ ದಿನ ನಿಮ್ಮ ಸ್ವಂತದ್ದು. ನಾಳೆ ಬರುತ್ತದೋ ಇಲ್ಲವೋ ಗೊತ್ತಿಲ್ಲ.
-ಸ್ವಾಮಿ ಶಿವಾನಂದ

★ ಪ್ರೀತಿಯಿಂದ ಸ್ಫೂರ್ತಿ ಹೊಂದಿದ ಮತ್ತು ಜ್ಞಾನದ ಮಾರ್ಗದರ್ಶನ ಹೊಂದಿದ ಜೀವನವೇ ಸಾರ್ಥಕ ಜೀವನ.
-ಬರ್ಟ್ರೆಂಡ್ ರಸೆಲ್

★ ಗೆಳೆಯರು ಕಷ್ಟಕಾಲದಲ್ಲಿ ಪ್ರೀತಿ ತೋರುತ್ತಾರೆ, ಸುಖದ ಕಾಲದಲ್ಲಿ ಅಲ್ಲ.
-ಯೂರಿಪಿಡಿಸ್

★ ಸಂತೋಷಕ್ಕೆ ಯಶಸ್ಸು ಕೀಲಿಕೈ ಅಲ್ಲ. ಯಶಸ್ಸಿಗೆ ಸಂತೋಷವೇ ಕೀಲಿಕೈ.
-ಆಲ್ಬರ್ಟ್ ಶ್ವಿಟ್ಜರ್